


# ಲಂಕನ್ನರ ಭುಜಬಲ

**ಟೆಸ್ಟ್ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ವಿಕೆಟ್ ಪಡೆದ ಎಡಗೈ/ಬಲಗೈ ಸ್ಪಿನ್ ಬೌಲರ್‌ಗಳು ಶ್ರೀಲಂಕಾದವರು ಎಂಬುದು ವಿಶೇಷ.**

■ **ವಿಕ್ರಂ ಕಾಂತಿಕೆರೆ**

ಈ ವರ್ಷದ ಮಾರ್ಚ್ 11. ಶ್ರೀಲಂಕಾದ ಗಾಲ್‌ನಲ್ಲಿ ಮುಕ್ತಾಯಗೊಂಡ ಬಾಂಗ್ಲಾದೇಶ ವಿರುದ್ಧದ ಆತಿಥೇಯರ ಟೆಸ್ಟ್ ಸರಣಿಯ ಮೊದಲ ಪಂದ್ಯದ ಕೊನೆಯ ದಿನ. ಏಳನೇ ಕ್ರಮಾಂಕದ ಬ್ಯಾಟ್ಸ್‌ಮನ್ ಲಿಟನ್ ದಾಸ್ ಅವರ ಬ್ಯಾಟಿನ ಮೇಲಂಚನ್ನು ಸೋಕಿ ನೆಗೆದು ಕವರ್ ಕಡೆಗೆ ಸಾಗುತ್ತಿದ್ದ ಚೆಂಡನ್ನು ಉಪುಲ್ ತರಂಗ ಕ್ಯಾಚ್ ತೆಗೆದುಕೊಂಡ ಕೂಡಲೇ ಆ ವಿಕೆಟ್ ಇತಿಹಾಸದ ಪುಟ ಸೇರಿತು. ಟೆಸ್ಟ್ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ವಿಕೆಟ್ ಕಬಳಿಸಿದ ಎಡಗೈ ಬೌಲರ್ ಎಂಬ ದಾಖಲೆ ಹೇರಾತ್ ಹೆಸರಿಗೆ ಸೇರಿತು. ಈ ಮೂಲಕ ಟೆಸ್ಟ್ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ವಿಕೆಟ್ ಪಡೆದ ಎಡಗೈ ಮತ್ತು ಬಲಗೈ ಬೌಲರ್‌ಗಳನ್ನು ಕೊಡುಗೆಯಾಗಿ ನೀಡಿದ ಖ್ಯಾತಿ ಶ್ರೀಲಂಕಾ ಪಾಲಾಯಿತು.

ಹೆಚ್ಚು ವಿಕೆಟ್ ಗಳಿಸಿದ ಬಲಗೈ ಬೌಲರ್ ಎಂಬ ಸಾಧನೆ ಮಾಡಿದ ಮುತ್ತಯ್ಯ ಮುರಳೀಧರ ದಾಖಲೆಯ ಒಂದು ದಶಕದ ನಂತರ ಹೇರಾತ್ ಈ ಸಾಧನೆ ಮಾಡಿದರು. ಶ್ರೀಲಂಕಾದ ಕ್ಯಾಂಡಿಯಲ್ಲಿ 2007ರ ಡಿಸೆಂಬರ್ ಮೂರರಂದು ಇಂಗ್ಲೆಂಡ್ ವಿರುದ್ಧದ ಟೆಸ್ಟ್‌ನಲ್ಲಿ ಪಾಲ್ ಕಾಲಿಂಗ್‌ವುಡ್ ವಿಕೆಟ್ ಉರುಳಿಸಿ ಮುತ್ತಯ್ಯ ಮುರಳೀಧರ ಆಸ್ಟ್ರೇಲಿಯಾದ ಶೇನ್ ವಾರ್ನ್ ಅವರ ದಾಖಲೆ ಅಳಿಸಿ ಹಾಕಿದ್ದರು.

ವಾರ್ನ್ ಖಾತೆಯಲ್ಲಿರುವುದು 708 ವಿಕೆಟ್. 1992ರಲ್ಲಿ ಆಸ್ಟ್ರೇಲಿಯಾ ವಿರುದ್ಧದ ಪಂದ್ಯದಲ್ಲಿ ಟೆಸ್ಟ್‌ಗೆ ಪದಾರ್ಪಣೆ ಮಾಡಿದ ಮುರಳೀಧರ 2010ರ ಜುಲೈನಲ್ಲಿ ಭಾರತ ವಿರುದ್ಧ ಗಾಲ್‌ನಲ್ಲಿ ನಡೆದ ಪಂದ್ಯದ ನಂತರ ಟೆಸ್ಟ್‌ಗೆ ವಿದಾಯ ಹೇಳಿದ್ದರು. ಆಗವರು

## ಯಾರಿವರು ಮುರಳಿ-ಹೇರಾತ್?

ಮುತ್ತಯ್ಯ ಮುರಳೀಧರ ಜನಿಸಿದ್ದು ಶ್ರೀಲಂಕಾದ ಕ್ಯಾಂಡಿಯಲ್ಲಿ, 1972ರ ಏಪ್ರಿಲ್ 17ರಂದು. ಒಂಬತ್ತನೇ ವಯಸ್ಸಿನಲ್ಲಿ ಶಾಲೆ ಮೆಟ್ಟಿಲೇರಿದ ಅವರು ಕ್ರಿಕೆಟ್ ರಂಗಕ್ಕೆ ಪ್ರವೇಶಿಸಿದ ಆರಂಭದಲ್ಲಿ ವೇಗದ ಬೌಲಿಂಗ್ ಮಾಡುತ್ತಿದ್ದರು. ನಂತರ ಕೋಚ್ ಸಲಹೆ ಮೇರೆಗೆ ಆಫ್ ಸ್ಪಿನ್ ಮಾಡಲು ಆರಂಭಿಸಿದರು. ಬದುಕಿನಲ್ಲಿ ಈ 'ತಿರುವು' ಪಡೆದಾಗ ಅವರ ವಯಸ್ಸು 14 ವರ್ಷ. ನಂತರ ಪ್ರಪಂಚದ ಬ್ಯಾಟ್ಸ್‌ಮನ್‌ಗಳನ್ನು ಗಿರಿಗಿಟ ಸುತ್ತಿಸಿದ ಮುರಳಿ 'ಗಾಜಿನ ಮೇಲೆ ಕೂಡ ಚೆಂಡಿಗೆ ತಿರುವು ನೀಡಬಲ್ಲ' ಬೌಲರ್ ಎಂಬ ಖ್ಯಾತಿಗೆ ಒಳಗಾಗಿದ್ದರು. ಶಾಲಾ ತಂಡದಲ್ಲಿ ಆಲ್‌ರೌಂಡರ್ ಆಗಿದ್ದ ಅವರು ಕಾಲೇಜು ಜೀವನದ ಅಂತಿಮ ಎರಡು ವರ್ಷ ಆಡಿದ ಪಂದ್ಯಗಳಲ್ಲಿ 100 ವಿಕೆಟ್ ಕಬಳಿಸಿದ್ದರು. ಐಪಿಎಲ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್, ರಾಯಲ್ ಚಾಲೆಂಜರ್ಸ್ ಮತ್ತು ಕೊಚ್ಚಿ ಟಸ್ಕರ್ಸ್ ಪರ ಆಡಿದ್ದಾರೆ.

ಹೇರಾತ್ ಜನಿಸಿದ್ದು 1978ರ ಮಾರ್ಚ್ 19ರಂದು ಲಂಕಾದ ಕುರುನೇಗಲದ ವಡುವಾವ ಎಂಬ ಗ್ರಾಮದಲ್ಲಿ. ಶಾಲಾ ದಿನಗಳಲ್ಲಿ ಆರಂಭಿಕ ಬ್ಯಾಟ್ಸ್‌ಮನ್ ಆಗಿದ್ದ ಅವರು ಕೂಡ ಮೊದಲು ವೇಗದ ಬೌಲರ್ ಆಗಿದ್ದರು. 'ಕುಳ್ಳ' ಆಗಿರುವುದರಿಂದ ಸ್ಪಿನ್ ಬೌಲಿಂಗ್ ಸೂಕ್ತ ಎಂದು ಕೋಚ್ ಹೇಳಿದ ಕಾರಣ ಅವರ ಕ್ರಿಕೆಟ್ ಬದುಕಿಗೂ 'ತಿರುವು' ಲಭಿಸಿತು. ಟೆಸ್ಟ್ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ವಿಕೆಟ್ ಪಡೆದವರ ಸಾಲಿನಲ್ಲಿ ಮುರಳಿ ಅಗ್ರ ಕ್ರಮಾಂಕದಲ್ಲಿದ್ದರೆ ಹೇರಾತ್ ಸ್ಥಾನ 18ನೇಯದು.